ತಳ್ಳಲು ಜೋಡುಗಳ ಜೊತೆ ತಳುಕು ಹಾಕುವುದುಂಟು. ವ್ಯಕ್ತಿಯೊಬ್ಬ ಘೋರವಾದ ತಪ್ಪು ಮಾಡಿ ಸಿಕ್ಕಿಹಾಕಿಕೊಂಡಾಗ ಆತನ ಕೊರಳಿಗೆ ಚಪ್ಪಲಿ ಹಾರ ಹಾಕಿ ಅವಮಾನಿಸಿ ಅವನು ಮಾನಸಿಕವಾಗಿ ಕುಗ್ಗಿ ಹೋಗುವಂತೆ ಜನರು ಶಿಕ್ಷೆ ಕೊಡುವುದು ಹೊಸದೇನೂ ಅಲ್ಲ.

ಸರಳ ಜೀವನ ನಡೆಸುವ ದೊಡ್ಡ ವ್ಯಕ್ತಿಗಳು ಕಡಿಮೆ ಬೆಲೆಯ ಚಪ್ಪಲಿಗಳನ್ನು ಬಳಸುವುದುಂಟು. ಮತ್ತೆ ಕೆಲವು ಸಾಮಾನ್ಯರು ಅತೀ ಬೆಲೆಬಾಳುವ ಜೋಡು ಬಳಸುತ್ತಾರೆ. ಇದು ಅವರ ಜೀವನಶೈಲಿ, ನಂಬಿಕೆ, ತತ್ವಗಳನ್ನು ಅವಲಂಬಿಸಿರುತ್ತದೆ. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ತಮ್ಮ ಸರಳ ಜೀವನದ ಭಾಗವಾದ ಹವಾಯಿ ಚಪ್ಪಲಿ ಹಾಕಿಕೊಂಡೇ ವಿಧಾನಸಭೆಯ ಕಲಾಪದಲ್ಲಿ ಪಾಲ್ಗೊಂಡಿದ್ದು ವಿಶೇಷವೆಂದು ಪತ್ರಿಕೆಯೊಂದು ವರದಿ ಮಾಡಿದೆ. ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಮೇಯರ್ ಸ್ಥಾನಕ್ಕಾಗಿ ನಡೆದ ಚುನಾವಣೆಯಲ್ಲಿ ಸಂಘಟನೆಯೊಂದರ ಕಾರ್ಯಕರ್ತನೊಬ್ಬ ಗೆದ್ದು ಬಂದಾಗ ಮಹಾರಾಷ್ಟ್ರ ಏಕೀಕರಣ ಸಮಿತಿಯ ಮಹಿಳೆಯೊಬ್ಬಳು ಅಸಹನೆಯಿಂದ ಸಭೆಯಲ್ಲಿಯೇ ಚಪ್ಪಲಿ ಕೈಯಲ್ಲಿ ಹಿಡಿದು ಪ್ರದರ್ಶಿಸಿದಳಂತೆ. 'ಇವರ ಕಾಲಿನಲ್ಲಿ ಇರುವುದೋ ಬಿಡುವುದೊ ನೀವೇ ಹೇಳಿ' ಎಂದು ಸ್ವತಃ ಆ ಮಹಿಳೆಯ ಚಪ್ಪಲಿಗಳೇ ಅಲವತ್ತುಕೊಂಡಿದ್ದರೆ ಆಶ್ಚರ್ಯ ಪಡಬೇಕಾಗಿಲ್ಲ.

ಹೀಗೆ ವಿವಿಧ ರಂಗದಲ್ಲಿ ವಿವಿಧ ರೀತಿಯಲ್ಲಿ ಜೋಡುಗಳೊಂದಿಗಿನ ಜಟಾಪಟಿ ನಿತ್ಯ ನಡೆಯುತ್ತಿರುತ್ತದೆ. ಈ ಜೋಡುಗಳನ್ನು ಬಿಟ್ಟು ನಾವಿಲ್ಲ, ನಾವಿಲ್ಲದೇ ಚಪ್ಪಲಿಗಳಿಗೆ ಬೆಲೆ ಇಲ್ಲ. ಚಪ್ಪಲಿಗಳ ಬಳಕೆ ಅಗತ್ಯವೂ ಅನಿವಾರ್ಯವೂ ಆಗಿದೆ. ಈ ಜೋಡು ಪುರಾಣಕ್ಕೆ ಆದಿಯೂ ಇಲ್ಲ, ಅಂತ್ಯವಂತೂ ಮೊದಲೇ ಇಲ್ಲ!

## ಎಸ್.ಆರ್. ರಾವಳ, ತೇರದಾಳ

ವಿಜಯಪುರ ಜಿಲ್ಲೆ ಇಂಡಿ ತಾಲ್ಲೂಕಿನ ಅಥರ್ಗಾದವರಾದ ರಾವಳರು ಪ್ರಸ್ತುತ ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕು ತೇರದಾಳದಲ್ಲಿದ್ದಾರೆ. ಅವರು ಖಾಸಗಿ ಹಣಕಾಸು ಸಂಸ್ಥೆಯೊಂದರ ಉದ್ಯೋಗಿ. ಶಿಕ್ಷಣ ಬಿ.ಕಾಂ ವರೆಗೆ. ಪ್ರಕಟಿತ ಕೃತಿಗಳು: 'ಡಗಳ ಅಂಗ್ಯಾಂವ', 'ಒಡಲ ಕುದಿತದ ಕಾಳು' (ಕವನ ಸಂಗ್ರಹ), 'ಇಂಗು ತಿಂದ ಮಂಗ' (ನಾಟಕ), 'ಶಿವ ಸನ್ನಿಧಿ'(ಪೌರಾಣಿಕ ನಾಟಕ), 'ಗುಡು ಸಾಬನೂ ಗೂಡಂಗಡಿಯೂ' (ಕಥಾ ಸಂಗ್ರಹ).